## 2016 ಕ.ತೀ.ವ 522

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

**ಶ್ರೀಯುತ ಮಾಗಡಿ ಶಂಕರ ರಾವ್ ಕೃಷ್ಣ ಮೂರ್ತಿ ಮತ್ತು ಇತರರು –ವಿರುದ್ಧ– ಪೊಲೀಸ್ ಕಮೀಷನರ್ ಮತ್ತು ಇತರರು***

ದಂಡ ಪ್ರಕ್ರಿಯಾ ಸಂಹಿತೆ ಕಲಂ 482ರಡಿಯಲ್ಲಿ ಕ್ರಿಮಿನಲ್ ಅರ್ಜಿ.

**ಒಬ್ಬ ಠಾಣಾಧಿಕಾರಿಯಿಂದ ತನಿಖೆಯಲ್ಲಿದ್ದ ಪ್ರಕರಣವನ್ನು ಅವನಿಗಿಂತ ಕಿರಿಯ ಶ್ರೇಣಿಯ ಆರಕ್ಷಕ ಅಧಿಕಾರಿಗೆ ಹಸ್ತಾಂತರಿಸಲು ದಂಡ ಪ್ರಕ್ರಿಯಾ ಸಂಹಿತೆ ಕಲಂ 36ರ ರಡಿಯಲ್ಲಿ ಬರುತ್ತದೆಯೇ ಎಂಬುದೇ ಸದರಿ ಅರ್ಜಿಯಲ್ಲಿನ ಮೂಲಭೂತ ಪ್ರಶ್ನೆ.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 36ನ್ನು ಓದಲಾಗಿ ಯಾವುದೇ ಉನ್ನತ ಮಟ್ಟದ ಆರಕ್ಷಕ ಅಧಿಕಾರಿಯು ತನಗಿಂತ ಕಿರಿಯ ಶ್ರೇಣಿಯ ಆರಕ್ಷಕ ಅಧಿಕಾರಿಗೆ ತನಿಖೆಯನ್ನು ಹಸ್ತಾಂತರಿಸುವ ಯಾವುದೇ ನಿಯಮಾವಳಿಗಳು ಕಂಡು ಬರುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿದೆ.**

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. 1997ರ ಕ್ರಿಮಿನಲ್ ಲಾ ಜರ್ನಲ್ 63 ಸಿಬಿಐ ಮತ್ತು ಮತ್ತೊಬ್ಬರು –ವಿರುದ್ಧ– ರಾಜೇಶ್ ಗಾಂಧಿ ಮತ್ತು ಮತ್ತೊಬ್ಬರು* | *(ಉಲ್ಲೇ) 4* |
| *2. ಎಐಆರ್ 2008 ಎಸ್‌ಸಿ 907 ಸಾಕಿರಿ ವಾಸು –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಮತ್ತು ಇತರರು* | *(ಉಲ್ಲೇ) 4* |
| *3. 2009(1) ಎಸ್‌ಸಿಸಿ 441 ನಿರ್ಮಲ ಸಿಂಗ್ ಕಹೌಲಾನ್ –ವಿರುದ್ಧ– ಪಂಜಾಬ್ ಸರ್ಕಾರ* | *(ಉಲ್ಲೇ) 5* |

*ಕ್ರಿಮಿನಲ್ ಅರ್ಜಿ ಸಂಖ್ಯೆ: 3338/2015, ದಿನಾಂಕ: 28ನೇ ಅಕ್ಟೋಬರ್, 2015.

*4. ಎಐಆರ್ 2009 ಎಸ್‌ಸಿ 2932*
*ಕೃಷ್ಣಲಾಲ್ -ವಿರುದ್ಧ- ಧರ್ಮೇಂದ್ರ ಬಾಪ್ನಾ (ಉಲ್ಲೇ) 5*
*5. (2014)1 ಎಸ್‌ಸಿಸಿ 666*
*ಬಿಹಾರ ಸರ್ಕಾರ -ವಿರುದ್ಧ- ಲಾಲು ಸಿಂಗ್ (ಉಲ್ಲೇ) 5*
*6. ಎಐಆರ್ 2001 ಎಸ್‌ಸಿ 668*
*ಸಿಬಿಐ -ವಿರುದ್ಧ- ರಾಜಾಸ್ತಾನ್ ಸರ್ಕಾರ*
*ಮತ್ತು ಇನ್ನೊಬ್ಬರು (ಉಲ್ಲೇ) 12*
*7. 1980 ಎಸ್‌ಸಿಸಿ (ಸಿಆರ್‌ಐ) 272*
*ಬಿಹಾರ ಸರ್ಕಾರ ಮತ್ತು ಇನ್ನೊಬ್ಬರು -ವಿರುದ್ಧ-*
*ಜೆ.ಎ.ಸಿ. ಸಲ್ಡಾನಾ ಮತ್ತು ಇತರರು (ಉಲ್ಲೇ) 12*
*8. ಎಐಆರ್ 2014 ಎಸ್‌ಸಿ 666*
*ಮನೋಹರ್ ಲಾಲ್ ಶರ್ಮ -ವಿರುದ್ಧ-*
*ಪ್ರಧಾನ ಕಾರ್ಯದರ್ಶಿ ಮತ್ತು ಇತರರು (ಉಲ್ಲೇ) 12*

ಅರ್ಜಿದಾರರ ಪರ : ಶ್ರೀ ಅರವಿಂದ್ ಕಾಮತ್ ಕೆ., ವಕೀಲರು.
1 ರಿಂದ 3ನೇ ಪ್ರತ್ಯರ್ಜಿದಾರರ ಪರ: ಶ್ರೀ ವಿಜಯಕುಮಾರ್ ಮಜಗೆ, ಅಡಿಷನಲ್ ಎಸ್‌ಪಿಪಿ
4ನೇ ಪ್ರತ್ಯರ್ಜಿದಾರರ ಪರ: ಶ್ರೀ ಸಿ.ವಿ. ಸುಧೀಂದ್ರ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ:**

ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಒಬ್ಬ ಠಾಣಾಧಿಕಾರಿಯಿಂದ ಪ್ರಕರಣವನ್ನು ತನಿಖೆ ಮಾಡಿಸುತ್ತಿರುವಾಗ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 36ನೇ ಪ್ರಕರಣದಡಿಯಲ್ಲಿ ಆ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರವನ್ನು ಚಲಾಯಿಸಿ, ತನಗಿಂತ ಕಿರಿಯ ದರ್ಜೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತೊಬ್ಬ

ಪೊಲೀಸ್ ಅಧಿಕಾರಿಗೆ ತನಿಖೆಯನ್ನು ವರ್ಗಾಯಿಸಬಹುದೆ? ಎಂಬುದು ಈ ಅರ್ಜಿಯಲ್ಲಿ ಪರಿಗಣನೆಗಾಗಿ ಉದ್ಭವಿಸಿರುವಂಥ ಒಂದು ವಿಶಿಷ್ಟ ಪ್ರಶ್ನೆಯಾಗಿರುತ್ತದೆ.

**2. ವಾಸ್ತವಾಂಶವೆಂದರೆ:**

ಇಲ್ಲಿನ ನಾಲ್ಕನೆ ಪ್ರತ್ಯರ್ಜಿದಾರನು, ಭಾರತೀಯ ದಂಡ ಸಂಹಿತೆ 403, 406, 409, 420, 464, 468, 471, 477ಎ, 385 ಮತ್ತು 120ಬಿ ಪ್ರಕರಣಗಳಡಿಯಲ್ಲಿ ದಂಡಿಸಬಹುದಾದ ಅಪರಾಧಗಳ ಸಂಬಂಧದಲ್ಲಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 190ನೇ ಪ್ರಕರಣದ ಉಲ್ಲೇಖದೊಂದಿಗೆ 200ನೇ ಪ್ರಕರಣದಡಿಯಲ್ಲಿನ ಅಧಿಕಾರ ವ್ಯಾಪ್ತಿಯಲ್ಲಿನ ಮ್ಯಾಜಿಸ್ಟ್ರೇಟರ ಮುಂದೆ ಖಾಸಗಿ ದೂರನ್ನು ದಾಖಲಿಸಿರುತ್ತಾರೆ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ (ಇನ್ನು ಮುಂದೆ ಸಂಹಿತೆಯೆಂದು ಉಲ್ಲೇಖಿಸಲಾಗಿರುತ್ತದೆ)ಯ 156(3)ನೇ ಪ್ರಕರಣದಡಿಯಲ್ಲಿ ಕಾರ್ಯ ನಿರ್ವಹಿಸುವ ಮಾನ್ಯ ಮ್ಯಾಜಿಸ್ಟ್ರೇಟರು ಮೊದಲ ಪ್ರತ್ಯರ್ಜಿದಾರ ಪೊಲೀಸರಿಗೆ 01.10.2014ರ ದಿನಾಂಕದ ಆದೇಶದ ಮೇರೆಗೆ ತನಿಖೆಗೆ ಸಂಬಂಧಿಸಿದಂತೆ ವಿಷಯವನ್ನು ಉಲ್ಲೇಖಿಸಲಾಗಿರುತ್ತದೆ. ಪ್ರಕರಣವನ್ನು 11.10.2014ರಂದು ಅಪರಾಧ ಸಂ.447/2014ರಲ್ಲಿ ನೋಂದಾಯಿಸಲಾಗಿರುತ್ತದೆ.

3. ಫಿರ್ಯಾದುದಾರರ ಪತ್ನಿಯು ಸಲ್ಲಿಸಿದ ಅರ್ಜಿಯ ಮೇಲೆ, ಪೊಲೀಸ್ ಕಮೀಷನರ್/ಮೊದಲ ಪ್ರತ್ಯರ್ಜಿದಾರರು ಕೇಂದ್ರ ಅಪರಾಧ ವಿಭಾಗಕ್ಕೆ ತನಿಖೆಯನ್ನು ವರ್ಗಾವಣೆ ಮಾಡಿರುತ್ತಾರೆಂಬುದು ಕಂಡುಬರುತ್ತದೆ. ತನಿಖೆಯ ವರ್ಗಾವಣೆಗೆ ಅನುಮತಿ ಕೋರಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಮೊದಲ ಪ್ರತ್ಯರ್ಜಿದಾರರ ಅರ್ಜಿಯ ಮೇಲೆ, ಆಪಾದಿತ ವ್ಯಕ್ತಿಗಳು ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

4. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಅರವಿಂದ್ ಕಾಮತ್ ಕೆ. ರವರು, ಜೆ.ಎಂ.ಎಫ್.ಸಿ ನ್ಯಾಯಾಲಯವು, ಅಧಿಕಾರ ವ್ಯಾಪ್ತಿಯಿರುವ ಸ್ಥಳೀಯ ಪೊಲೀಸರಿಗೆ ತನಿಖೆಯನ್ನು ಉಲ್ಲೇಖಿಸಿರುವಾಗ, ಮೊದಲ ಪ್ರತ್ಯರ್ಜಿದಾರ/ಪೊಲೀಸ್ ಕಮೀಷನರ್‌ರವರಿಗೆ ತನಿಖೆಯಲ್ಲಿ ಮಧ್ಯೆ ಪ್ರವೇಶಿಸುವ ಅಥವಾ ಹಸ್ತಕ್ಷೇಪ

ಮಾಡುವ ಯಾವುದೇ ಅಧಿಕಾರವಿರುವುದಿಲ್ಲ. ***ಸಿಬಿಐ ಮತ್ತು ಮತ್ತೊಬ್ಬರು –ವಿರುದ್ಧ– ರಾಜೇಶ್ ಗಾಂಧಿ ಮತ್ತು ಮತ್ತೊಬ್ಬರು***[1], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ನಿರ್ದಿಷ್ಟ ತನಿಖಾ ಏಜೆನ್ಸಿಯ ಆಯ್ಕೆಗೆ ದೂರುದಾರನಿಗೆ ವಿಶಿಷ್ಟ ಅಧಿಕಾರವಿರುವುದಿಲ್ಲ. ದೂರುದಾರನಿಗೆ ತನಿಖೆ ಸಾಗುತ್ತಿರುವ ವಿಧಾನದಲ್ಲಿ ಸಂತೃಪ್ತಿ ಇಲ್ಲದಿದ್ದಲ್ಲಿ, ಆತನ ಕುಂದುಕೊರತೆಯನ್ನು ನಿವಾರಿಸುವುದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 156(3) ಪ್ರಕರಣದಡಿಯಲ್ಲಿ ತನಿಖೆಯನ್ನು ಉಲ್ಲೇಖಿಸುವಂಥ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಸಲ್ಲಿಸುವುದೊಂದೆ ಆತನ ಪಾಲಿನ ಏಕೈಕ ಮಾರ್ಗವಾಗಿರುತ್ತದೆ. ಇದು ಮ್ಯಾಜಿಸ್ಟ್ರೇಟರಿಗೆ ಮನವರಿಕೆಯಾದಲ್ಲಿ, ಅವರು ***ಸಾಕಿರಿ ವಾಸು –ವಿರುದ್ಧ– ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು***[2], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ಯುಕ್ತವಾದ ತನಿಖೆಗೆ ಆದೇಶಿಸಬಹುದಾಗಿರುತ್ತದೆ. ತನಿಖೆಯನ್ನು ಸಿಸಿಬಿಗೆ ಹಸ್ತಾಂತರಿಸದೆ, ಅಧಿಕಾರ ವ್ಯಾಪ್ತಿಯ ಪೊಲೀಸರೊಂದಿಗೆ ಮಾತ್ರ ಮ್ಯಾಜಿಸ್ಟ್ರೇಟರ ಆದೇಶದ ಪ್ರಕಾರ ಮುಂದುವರೆಸತಕ್ಕದ್ದಾಗಿರುತ್ತದೆ.

5. ಇದಕ್ಕೆ ಉತ್ತರವಾಗಿ, 4ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಸಿ.ವಿ. ಸುಧೀಂದ್ರ ರವರು ಅರ್ಜಿದಾರರು ಮತ್ತು ನಾಲ್ಕನೇ ಪ್ರತ್ಯರ್ಜಿದಾರರು/ದೂರುದಾರರು ನೋಂದಾಯಿತ ಪಾಲುದಾರಿಕೆ ಸಂಸ್ಥೆಯ ಪಾಲುದಾರರಾಗಿರುತ್ತಾರೆ; ಅರ್ಜಿದಾರರು ವ್ಯವಸ್ಥಾಪನಾ ಪಾಲುದಾರರಾಗಿದ್ದು, ಅವರೊಳಗೆ ಭಿನ್ನಾಭಿಪ್ರಾಯಗಳು ಉದ್ಭವಿಸಿದ ಹಿನ್ನೆಲೆಯಲ್ಲಿ, ದೂರುದಾರರಿಗೆ ವ್ಯವಸ್ಥಾಪನಾ ಪಾಲುದಾರರಾಗಿ ಮುಂದುವರೆಯುವುದು ಕಷ್ಟಸಾಧ್ಯವಾಗಿರುತ್ತದೆ. ಇವರು ವ್ಯವಸ್ಥಾಪನಾ ಪಾಲುದಾರರ ಸ್ಥಾನಕ್ಕೆ ರಾಜೀನಾಮೆ ನೀಡಿರುತ್ತಾರಾದರೂ, ಇವರನ್ನು ಸಂಸ್ಥೆಯ ಪಾಲುದಾರಿಕೆಯಿಂದ ವಜಾಗೊಳಿಸಿರುವುದಿಲ್ಲ; ಆಪಾದಿತ ವ್ಯಕ್ತಿಗಳು, ಅವನ ರಾಜೀನಾಮೆ ಪತ್ರವು ವ್ಯವಸ್ಥಾಪನಾ ಪಾಲುದಾರನ ಜವಾಬ್ದಾರಿಗೆ ಸಂಬಂಧಿಸಿದ್ದಾಗ್ಯೂ, ಪಾಲುದಾರಿಕೆ ಸಂಸ್ಥೆಯಿಂದ ನಿವೃತ್ತಿಯಾಗಿರುವಂತೆ ಪರಿಗಣಿಸಿ, ಸುಳ್ಳು ದಸ್ತಾವೇಜನ್ನು ಸೃಷ್ಟಿಸಿ, ಅವರು ರಾಜೀನಾಮೆ ನೀಡಿರುತ್ತಾರೆಂದು ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳಿಗೆ

1. 1997ರ ಕ್ರಿಮಿನಲ್ ಲಾ ಜರ್ನಲ್ 63
2. ಎಐಆರ್ 2008 ಎಸ್‌ಸಿ 907

ತಿಳಿಸಿರುತ್ತಾರೆ. ಹಾಗಾಗಿ, ಸಂಸ್ಥೆಗೆ ಅವರ ಪ್ರವೇಶವನ್ನು ಮತ್ತು ಸಂಸ್ಥೆಯ ಇ–ಮೇಲ್ ಮುಂತಾದವುಗಳನ್ನು ನಿಷೇಧಿಸಿರುತ್ತಾರೆ. ಅದರ ಮೇಲೆ, ಅಧಿಕಾರ ವ್ಯಾಪ್ತಿಯಿರುವ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಲು ಅವರನ್ನು ಒತ್ತಾಯ ಪಡಿಸಿದ್ದು, ದೂರನ್ನು ತನಿಖೆಗಾಗಿ 29.09.2014ರಂದು ಉಲ್ಲೇಖಿಸಿದ್ದಾಗ್ಯೂ, ತನಿಖಾಧಿಕಾರಿಯು ಪ್ರಕರಣವನ್ನು ನೋಂದಾಯಿಸಿರುವುದಿಲ್ಲ ಮತ್ತು ತನಿಖೆಯು ತ್ವರಿತತೆಯನ್ನು ಪಡೆದುಕೊಂಡಿರುವುದಿಲ್ಲ.

ಇದು, ಫಿರ್ಯಾದುದಾರರಿಗೆ, ಸ್ಥಳೀಯ ಪೊಲೀಸರು ಆಪಾದಿತ ವ್ಯಕ್ತಿಗಳೊಂದಿಗೆ ಷಾಮೀಲಾಗಿದ್ದಾರೆಂದು ಸಂದೇಹ ಬರಲು ಕಾರಣವಾಗಿರುತ್ತದೆ. ಒಂದೇ ದರ್ಜೆಯಲ್ಲಿರುವ ಪೊಲೀಸ್ ಅಧಿಕಾರಿಗೆ ತನಿಖೆಯನ್ನು ವರ್ಗಾವಣೆ ಮಾಡಿರುವಲ್ಲಿ ಸಂಹಿತೆಯ 36ನೇ ಪ್ರಕರಣದಡಿಯಲ್ಲಿ ಆತನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿರುವುದಕ್ಕೆ ಫಿರ್ಯಾದುದಾರರ ಸಾಕ್ಷ್ಯವೂ ಆಗಿರುವಂಥ ಆತನ ಪತ್ನಿಯ ಅರ್ಜಿಯ ಮೇಲೆ ಕಮೀಷನರ್‌ರವರು ಕ್ರಮ ಕೈಗೊಂಡಿರುವಲ್ಲಿ ಯಾವುದೇ ದೋಷವಿರುವುದಿಲ್ಲ. ***ಸಾಕಿರಿ ವಾಸು–ವಿರುದ್ಧ– ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು*** ಮೇಲಿನ ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು, ಮ್ಯಾಜಿಸ್ಟ್ರೇಟರು ಸರಿಯಾದ ತನಿಖೆಗೆ ಮತ್ತು ಇತರೆ ಯುಕ್ತ ಕ್ರಮಗಳನ್ನು ಕೈಗೊಳ್ಳುವುದು ಮೂಲಭೂತವಾದುದೆಂದು ಆದೇಶಿಸಬಹುದು ಮತ್ತು ಇದರ ಸರಿತನವನ್ನು ***ನಿರ್ಮಲ ಸಿಂಗ್ ಕಹೌಲಾನ್ –ವಿರುದ್ಧ– ಪಂಜಾಬ್ ಸರ್ಕಾರ***[3] ಮತ್ತು ***ಕೃಷ್ಣಲಾಲ್ –ವಿರುದ್ಧ– ಧರ್ಮೇಂದ್ರ ಬಾಪ್ನಾ***[4] ಪ್ರಕರಣದಲ್ಲಿ ಸಂದೇಹಿಸಲಾಗಿರುತ್ತದೆ. ಮುಂದುವರೆದು ***ಬಿಹಾರ ಸರ್ಕಾರ–ವಿರುದ್ಧ– ಲಾಲು ಸಿಂಗ್***[5], ಪ್ರಕರಣದಲ್ಲಿ ಕಾನೂನಿನ ಸ್ಥಾನಮಾನವನ್ನು, ಮ್ಯಾಜಿಸ್ಟ್ರೇಟರು ನಿರ್ವಹಿಸುವ ತನಿಖೆಯು ಕೇವಲ ಮೇಲ್ನೋಟದ ತನಿಖೆಯಾಗಿರುತ್ತದೆಂದು ಸ್ಪಷ್ಟಪಡಿಸುತ್ತದೆ. ***ಸಾಕಿರಿ ವಾಸು*** ಪ್ರಕರಣದಲ್ಲಿ ವಿಧಿಸಿರುವ ಕಾನೂನು ಪ್ರಸ್ತಾವವನ್ನು ದುರ್ಬಲಗೊಳಿಸಲಾಗಿರುತ್ತದೆ.

---

3. 2009 (1) ಎಸ್‌ಸಿಸಿ 441
4. ಎಐಆರ್ 2009 ಎಸ್ 2932

6. 4ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಸಿ.ವಿ. ಸುಧೀಂದ್ರ ರವರು, ಮುಂದುವರೆದು, ಸಂಹಿತೆಯ 156(3) ಪ್ರಕರಣದಡಿಯಲ್ಲಿ ಉಲ್ಲೇಖಿಸಿರುವಂತೆ ದೂರು ತನಿಖೆ ನಡೆಸಲು ಪೊಲೀಸರಿಗೆ ಮೂಲಾಧಾರಾವಾಗಿರುತ್ತದೆ/ನೆನಪೋಲೆಯಂತಿರುತ್ತದೆಂದೂ ಸಹ ವಾದಿಸಿರುತ್ತಾರೆ. ಒಮ್ಮೆ ಉಲ್ಲೇಖನೀಯ ಆದೇಶವನ್ನು ಮಾಡಿದರೆ, ವಿಷಯವು ತನಿಖೆ ಮಾಡುವ ಪೊಲೀಸರ ವ್ಯಾಪ್ತಿಯೊಳಗೆ ಬರುತ್ತದೆ. ಸಂಹಿತೆಯ 36ನೇ ಪ್ರಕರಣವು, ವರಿಷ್ಠ ಪೊಲೀಸ್ ಅಧಿಕಾರಿಯು ಠಾಣಾಧಿಕಾರಯಿಂದ ತನಿಖೆಯನ್ನು ಕೈಗೆತ್ತಿಕೊಳ್ಳಬಹುದೆಂದು ನಿರೂಪಿಸುತ್ತದೆ. ವಿಷಯವನ್ನು ತನಿಖೆ ಮಾಡಲು ಯುಕ್ತ ಪ್ರಾಧಿಕಾರವಾಗಿರುವಂಥ ವಿಶೇಷ ಪೊಲೀಸ್ ದಳವಾಗಿರುವ ಸಿ.ಐ.ಡಿ. ಮತ್ತು ಸಿ.ಸಿ.ಬಿ. ಯಂಥ ವಿಶೇಷ ದಳಕ್ಕೆ ತನಿಖೆಯನ್ನು ವರ್ಗಾವಣೆ ಮಾಡುವುದು ಸಂಹಿತೆಯ 36ನೇ ಪ್ರಕರಣದ ಯುಕ್ತತೆಯಲ್ಲಿಯೇ ಬರುತ್ತದೆ. ನ್ಯಾಯಿಕ ತೀರ್ಮಗಳ ಸರಣಿಯಿಂದ, ಸಂಹಿತೆಯ 36ನೇ ಪ್ರಕರಣದ ಬಲದಿಂದ, ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ದರ್ಜೆಯಲ್ಲಿ ವರಿಷ್ಠರಾಗಿರುವ ಅಧಿಕಾರಿಯು ಹೆಚ್ಚಿನ ತನಿಖೆ ನಡೆಸಲು ತಮ್ಮ ಅಧಿಕಾರವನ್ನು ಚಲಾಯಿಸಬಹುದು.

7. ಮಾನ್ಯ ನ್ಯಾಯವಾದಿಗಳು, ***ಬಿಹಾರ ಸರ್ಕಾರ –ವಿರುದ್ಧ– ಲಾಲು ಸಿಂಗ್‌ನ***[6], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯಿಂದ ತನಿಖೆಯನ್ನು ಕೈಗೆತ್ತಿಕೊಂಡಂಥ) ರಿಂದ ತನಿಖೆಯನ್ನು ವಹಿಸಿಕೊಂಡಂಥ ಸಿ.ಐ.ಡಿ.ಯ ಇನ್‌ಸ್ಪೆಕ್ಟರ್‌ರವರು ವರದಿ ಸಲ್ಲಿಸಲು ಸಕ್ಷಮರಾಗಿರುತ್ತಾರೆ. ಸದರಿ ಸಂದರ್ಭಗಳಲ್ಲಿ, ವಿಷಯವನ್ನು ತನಿಖೆ ಮಾಡಲು ಸಂಹಿತೆಯ 36ನೇ ಪ್ರಕರಣದಡಿಯಲ್ಲಿ ಅಧಿಕೃತಗೊಂಡಂಥ ಪೊಲೀಸ್ ಕಮೀಷನರ್, ಠಾಣೆಯ ಪ್ರಭಾರದಲ್ಲಿರುವ ದರ್ಜೆಗಿಂತ ಕಡಿಮೆ ಇರದಂಥ ತನಗಿಂತ ಕೆಳಗಿನ ದರ್ಜೆಯಲ್ಲಿರುವ ಅಧಿಕಾರಿಗೆ ತನ್ನ ಅಧಿಕಾರವನ್ನು ಪ್ರತ್ಯಾಯೋಜಿಸಿದಲ್ಲಿ, ಆತ, ಆತನ ಅಧಿಕಾರ ವ್ಯಾಪ್ತಿಯೊಳಗೆ ಕಾರ್ಯ ನಿರ್ವಹಿಸುತ್ತಿದ್ದು, ಅರ್ಜಿದಾರರು, ಸದರಿ ಆರಂಭಿಕ ಹಂತದಲ್ಲಿ ಅಂದರೆ ಅಂತಿಮ

4. ಎಐಆರ್ 2008 ಎಸ್‌ಸಿ 907:ಎಐಆರ್ 2009 ಎಸ್‌ಸಿ 2932

5. (2014)1 ಎಸ್‌ಸಿಸಿ 666)

6. (2014) 1 ಎಸ್‌ಸಿಸಿ 666)

ವರದಿಯನ್ನು ಸಲ್ಲಿಸುವವರೆಗೆ ತನಿಖೆಯ ವಿಧಾನವನ್ನು ಪ್ರಶ್ನಿಸುವಂತಿಲ್ಲ. ಅಂತಿಮ ವರದಿಯಿಂದ ಬಾಧಿತರಾದಲ್ಲಿ, ಅವರು ಅಂತಿಮ ವರದಿಯನ್ನು ಪ್ರಶ್ನಿಸಿ ಕಾನೂನಿನಡಿಯಲ್ಲಿ ಅನುಮತೀಯವಾದ ಪರಿಹಾರವನ್ನು ಕೋರಬಹುದು.

8. ಚರ್ಚಿಸುತ್ತಿರುವ ಸಂಹಿತೆಯ 36ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

***“36ನೇ ಪ್ರಕರಣ – ಪೊಲೀಸ್ ವರಿಷ್ಠಾಧಿಕಾರಿಗಳ ಅಧಿಕಾರಗಳು:***

*ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ದರ್ಜೆಯಲ್ಲಿ ವರಿಷ್ಠರಾಗಿರುವಂಥ ಪೊಲೀಸ್ ಅಧಿಕಾರಿಯು, ತನ್ನ ಠಾಣೆಯ ಮಿತಿಯೊಳಗೆ ಅಂಥ ಅಧಿಕಾರಿಯು ಚಲಾಯಿಸಬಹುದಾದಂತೆ, ಅವರು ನೇಮಕವಾದಂಥ ಸ್ಥಳೀಯ ಪ್ರದೇಶದ ವ್ಯಾಪ್ತಿಯಲ್ಲಿ ಸದರಿ ಅಧಿಕಾರಗಳನ್ನು ಚಲಾಯಿಸಬಹುದು”.*

9. ಪ್ರಕರಣದ ಒಂದು ಸರಳ ಹಾಗೂ ಸಾದಾ ಓದು, ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಶ್ರೇಣಿಗಿಂತ ಮೇಲಿರುವ ವರಿಷ್ಠ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯ ಕ್ಷೇತ್ರದೊಳಗೆ ತನ್ನ ಠಾಣೆಯ ಮಿತಿಯಲ್ಲಿರುವ ಠಾಣಾಧಿಕಾರಿಯು ಚಲಾಯಿಸುವಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದೆಂಬ ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳುತ್ತದೆ. ಮುಂದುವರೆದು ನಾಲ್ಕನೇ ಪ್ರತ್ಯರ್ಜಿದಾರ/ ಫಿರ್ಯಾದುದಾರರಿಂದ ಉದ್ಧರಿಸಲ್ಪಟ್ಟ ಪ್ರಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಯು ವಿಷಯವನ್ನು ತನಿಖೆ ಮಾಡಲು ತಮಗಿಂತ ಕೆಳಗಿನ ದರ್ಜೆಯಲ್ಲಿರುವ ತನಿಖಾಧಿಕಾರಿಗಳಿಂದ ತನಿಖೆಯುನ್ನು ವಹಿಸಿಕೊಳ್ಳಬಹುದೆಂಬುದನ್ನು ಒಪ್ಪಿಕೊಂಡಿರುತ್ತಾರೆ. ಇದರೊಂದಿಗೆ ನಮ್ಮನ್ನು “ತನಿಖೆಯನ್ನು ವಹಿಸಿಕೊಳ್ಳುವುದು ಮತ್ತು ನಿರ್ವಹಿಸುವುದು, ಮತ್ತೊಬ್ಬ ಪೋಲೀಸ್ ಅಧಿಕಾರಿಯಿಂದ ನಿರ್ವಹಿಸಬೇಕಾದ ತನಿಖಾಧಿಕಾರದ ಪ್ರತ್ಯಾಯೋಜನೆಯನ್ನು ಸ್ವತಃ ಒಳಗೊಳ್ಳುತ್ತದೆಂಬ” ತುಂಬಾ

ಉತ್ತಮವಾದ ಮತ್ತು ನಿರ್ಣಾಯಕವಾದ ಅಂಶದ ಮೇಲೆ ವಿವೇಚಿಸುವಂತೆ ಮಾಡುತ್ತದೆ. ಇಂಥ ಸಂದರ್ಭವನ್ನು ನಾಲ್ಕನೇ ಪ್ರತ್ಯರ್ಜಿದಾರ/ಫಿರ್ಯಾದುದಾರನು ಉದಾಹರಿಸಿದ ಯಾರೇ ಪ್ರಾಧಿಕಾರಿಗಳನ್ನು ಉದಾಹರಿಸಲಾಗಿರುವುದಿಲ್ಲ. ಸಂಹಿತೆಯ 36ನೇ ಪ್ರಕರಣದಡಿಯಲ್ಲಿ ತಮ್ಮ ಅಧಿಕಾರವನ್ನು ಪೋಲೀಸ್ ವರಿಷ್ಠಾಧಿಕಾರಿಯು ಪ್ರತ್ಯಾಯೋಜಿಸಬಹುದೆಂದು ಪೋಲೀಸ್ ಕೈಪಿಡಿಯಲ್ಲಾಗಲೀ ಅಥವಾ ಸರ್ಕಾರದ ಯಾವುದೇ ಅಧಿಸೂಚನೆಯಲ್ಲಾಗಲೀ ಕಂಡು ಬಂದಿರುವುದಿಲ್ಲ.

10. ಅರ್ಜಿದಾರರು, ನಗರ ಅಪರಾಧ ದಳದಿಂದ ಮತ್ತಷ್ಟು ತನಿಖೆಗೆ ಪೋಲೀಸ್ ಕಮೀಷನರ್, ಬೆಂಗಳೂರು ಇವರು ನಿರ್ದೇಶಿಸುವ ಮೂಲಕ 25.04.2015ರಂದಿನ 'ಡಿ' ಅನುಬಂಧದಲ್ಲಿರುವಂತೆ ಅವರ ಆದೇಶದ ಮೂಲಕ ಹೆಚ್ಚು ಬಾಧಿತರಾಗಿರುತ್ತಾರೆ. ಪೋಲೀಸ್ ಸಹಾಯಕ ಆಯುಕ್ತರು (ಅಪರಾಧಗಳು), ಸಿಸಿಬಿಯ ಪೋಲೀಸ್ ಅಧಿಕಾರಿಯು ಮೂಲಕ ನಿರ್ವಹಿಸಬೇಕಾದ ತನಿಖೆಗೆ ಆದೇಶಿಸಲು ನಿರ್ದೇಶಿತರಾಗಿರುತ್ತಾರೆ. ಅಧಿಕಾರ ವ್ಯಾಪ್ತಿಯ ಪೋಲೀಸ್ ಠಾಣೆಯ ಪೋಲೀಸ್ ಇನ್ಸ್‌ಪೆಕ್ಟರ್‌ರವರು ತನಿಖೆಯನ್ನು ನಡೆಸುವಂಥ ಸಿಸಿಬಿಯ ಅಂಥ ಪೋಲೀಸ್ ಅಧಿಕಾರಿಗಳಿಗೆ ತನಿಖೆಯನ್ನು ಹಸ್ತಾಂತರಿಸಲು ನಿರ್ದೇಶಿತರಾಗಿರುತ್ತಾರೆ. ಈ ಆದೇಶದ ಪರಿಣಾಮವಾಗಿ, ತನಿಖಾಧಿಕಾರಿಗಳು, 'ಎಕ್ಸ್' ಅನುಬಂಧ ಪತ್ರಕ್ಕನುಸಾರವಾಗಿ ಸಿಸಿಬಿಗೆ ತನಿಖೆಯನ್ನು ವರ್ಗಾಯಿಸಲು ಮಾನ್ಯ ಮ್ಯಾಜಿಸ್ಟ್ರೇಟರಿಂದ ಅನುಮತಿಯನ್ನು ಕೋರಿರುತ್ತಾರೆ. ಫಿರ್ಯಾದುದಾರನ ಪತ್ನಿಯು ಸಲ್ಲಿಸಿರುವ ಅರ್ಜಿಯಿಂದಾಗಿ ಈ ಆದೇಶವನ್ನು ಹೊರಡಿಸಲಾಗಿರುತ್ತದೆಂದು ಅನುಬಂಧ 'ಡಿ' ಯಿಂದ ತಿಳಿದುಬಂದಿರುತ್ತದೆ. ಇತರೆ ವಿಷಯಗಳೊಂದಿಗೆ, ಅರ್ಜಿದಾರರು ಪೋಲೀಸ್ ಕಮೀಷನರ್‌ರವರಿಗೆ ಅರ್ಜಿ ಸಲ್ಲಿಸುವಲ್ಲಿ ಫಿರ್ಯಾದುದಾರರ ಪತ್ನಿಯ ಅಹವಾಲು ಹೇಳಿಕೊಳ್ಳುವ ಹಕ್ಕು ಮತ್ತು ಮಾಲೀಕತ್ವ ಹಾಗೂ ಆಕೆಯ ಅರ್ಜಿಯ ಮೇಲೆ ಪೋಲೀಸ್ ಕಮೀಷನರ್‌ರವರು ಕೈಗೊಂಡ ಕ್ರಮದ ಕಾನೂನು ಸಮ್ಮತತೆನ್ನು ಪ್ರಶ್ನಿಸಿರುತ್ತಾರೆ. ಆದರೆ ಯಾರ ಕೋರಿಕೆ ಮತ್ತು ಯಾವ ಕಾರಣಕ್ಕಾಗಿ ಅನುಬಂಧ 'ಡಿ' ಯಲ್ಲಿರುವಂತೆ ಆದೇಶವನ್ನು ಹೊರಡಿಸಲಾಗಿರುತ್ತದೆಂಬುದು ಗೌಣವಾದ ವಿಚಾರವಾಗಿರುತ್ತದೆ. ವಿಷಯವು ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟರ

ಆದೇಶದಡಿಯಲ್ಲಿ ಸ್ಥಳೀಯ ಪೊಲೀಸರು ನಡೆಸುತ್ತಿರುವ ತನಿಖೆಯ ಮಧ್ಯದಲ್ಲಿನ ಅನುಬಂಧ 'ಡಿ' ಯಲ್ಲಿನ ಆದೇಶದ ಕಾನೂನು ಸಮ್ಮತತೆಗೆ ಮಾತ್ರ ಸಂಬಂಧಪಡುತ್ತದೆ. ಕಮೀಷನರ್ ಹೊರಡಿಸಿರುವ ಆದೇಶ, ಮ್ಯಾಜಿಸ್ಟ್ರೇಟರು ಹೊರಡಿಸಿರುವ ನ್ಯಾಯಿಕ ಆದೇಶಗಳ ಎದುರಿಗೆ ಮುಖಾಮುಖಿಯಾಗಿ ನಿಲ್ಲುವಂತಹ ಪರಿಸ್ಥಿತಿ ಉದ್ಭವಿಸಿರುತ್ತದೆ.

11. ಇಡೀ ಬೆಂಗಳೂರು ನಗರಕ್ಕೆ ಪೊಲೀಸ್ ಕಮೀಷನರ್‌ರವರ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯು ರಾಜ್ಯ ಸರ್ಕಾರದಿಂದ ನಿರ್ದಿಷ್ಟಪಡಿಸಲಾದಂತೆ ಇರುತ್ತದೆ. ಪೊಲೀಸ್ ಕಮೀಷನರ್‌ರವರು ಕರ್ನಾಟಕ ಪೊಲೀಸ್ ಅಧಿನಿಯಮ, 1963ರ 2(22) ನೇ ಪ್ರಕರಣದಿಂದ ಪರಿಭಾಷಿಸಿದಂತ ವರಿಷ್ಠ ಪೊಲೀಸ್ ಅಧಿಕಾರಿಯಾಗಿರುತ್ತಾರೆ. ಪೊಲೀಸ್ ಇನ್ಸ್‌ಪೆಕ್ಟರ್‌ರವರ ದರ್ಜೆಯಲ್ಲಿರುವಂಥ ಪೊಲೀಸ್ ಠಾಣೆಯ ಪ್ರಭಾರದ ಅಧಿಕಾರಿಯ ಬಗ್ಗೆ ಸಂಹಿತೆಯ 2(ಓ) ಪ್ರಕರಣದಡಿಯಲ್ಲಿ ಪರಿಭಾಷಿಸಿದ್ದು, ಆತ ಸಾಮಾನ್ಯವಾಗಿ, ವ್ಯವಸ್ಥೆಯ ಕ್ರಮಬದ್ಧ ಶ್ರೇಣಿಯಲ್ಲಿ ಕೆಳಗಿನ ದರ್ಜೆಯಲ್ಲಿಯೇ ಇರುತ್ತಾನೆ.

12. ***ನಿರ್ಮಲ್ ಸಿಂಗ್ ಖ್ಲಾಲ –ವಿರುದ್ಧ– ಪಂಜಾಬ್ ಸರ್ಕಾರ ಮತ್ತು ಇತರರು ಇದರೊಂದಿಗೆ ಮತ್ತೊಂದು (ಮೇಲಿನ),*** ಪ್ರಕರಣದ 27ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:

> *"27. ಪೋಲಿಸ್ ಅಧಿನಿಯಮ, 1861ರ 3ನೇ ಪ್ರಕರಣದ ಪರಿಭಾಷೆ, ತನಿಖೆಯ ಅಧೀಕ್ಷತೆಯ ವಿಷಯದಲ್ಲಿ ರಾಜ್ಯದ ನಿಲುವು ಅಂತಿಮವಾಗಿರುತ್ತದೆ. ಸದರಿ ಉಪಬಂಧದೊಂದಿಗೆ, ಸಂಹಿತೆಯ 36ನೇ ಪ್ರಕರಣವನ್ನು ಓದಲೇ ಬೇಕಾಗುತ್ತದೆ. ಆದ್ದರಿಂದ, ಸಂಹಿತೆಯ 36ನೇ ಪ್ರಕರಣವು "ದರ್ಜೆಯಲ್ಲಿ" ಎಂಬ ಪದಗಳನ್ನು ಬಳಸಿರುವುದು, ಇದಕ್ಕೆ ಉದ್ದೇಶಪೂರ್ವಕ ಅರ್ಥವನ್ನು ಕೊಡುತ್ತವೆ. ಮೇಲೆ ನಮೂದಿಸಿರುವ ಉಪಬಂಧಗಳ ಸರಳ ಓದಿನಿಂದ ಮೂರು*

*ಅಂಶಗಳು ಕಂಡು ಬಂದಿದ್ದು, ಅವು ಈ ಮುಂದಿನಂತಿವೆ; ಎಂದರೆ, (i) ಪ್ರಭಾರದಲ್ಲಿರುವ ಅಧಿಕಾರಿಯು ತನಿಖೆಯನ್ನು ನಡಸಲೇಬೇಕು; (ii) ಇದನ್ನು ದರ್ಜೆಯಲ್ಲಿ ಆತನಿಗಿಂತ ಮೇಲಿರುವ ಅಧಿಕಾರಿಯು ಮೇಲ್ವಿಚಾರಣೆ ನಡೆಸಬೇಕು; ಮತ್ತು (iii) ಅವರು ನೇಮಕಗೊಂಡಿರುವಂಥ ಸ್ಥಳೀಯ ಪ್ರದೇಶದ ಸಂಬಂಧದಲ್ಲಿ, ಆದರೆ, ರಾಜ್ಯದ ಅಧಿಕಾರದ ಸಂದರ್ಭ ಅಂತೆಯೇ ಅಧಿನಿಯಮದ ಉಪಬಂಧಗಳ ಸಂದರ್ಭದಲ್ಲಿ ಅದು, ನಮ್ಮ ಅಭಿಪ್ರಾಯದಲ್ಲಿ ವ್ಯಾಪಕ ಅನ್ವಯವನ್ನು ಅಪೇಕ್ಷಿಸುತ್ತದೆ".*

ನ್ಯಾಯಿಕ ತೀರ್ಪುಗಳ ಸರಣಿಗಳಿಂದ, ಸಂಹಿತೆಯ 36ನೇ ಪ್ರಕರಣದ ವ್ಯಾಪ್ತಿ ಮತ್ತು ಪರಿಧಿಯನ್ನು ಉತ್ತಮವಾಗಿ ಪರಿಭಾಷಿಸಲಾಗಿರುತ್ತದೆ ಮತ್ತು ಪೊಲೀಸ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಶ್ರೇಣಿಗಿಂತ ಬೆಂಗಳೂರು ಕಮೀಷನರರವರ ದರ್ಜೆಯು ಮೇಲಿನದೆಂಬುದರಲ್ಲಿ ಯಾವುದೇ ಸಂಶಯವಿರುವುದಿಲ್ಲ. ಅಧಿಕಾರ ವ್ಯಾಪ್ತಿಯ ತನಿಖಾಧಿಕಾರಿಗಳಿಂದ ತನಿಖೆಯನ್ನು ತೆಗೆದುಕೊಳ್ಳುವ ವರಿಷ್ಠ ಅಧಿಕಾರಿಯ ಸ್ಥಾನದಲ್ಲಿರುವ ಪೊಲೀಸ್ ಕಮೀಷನರ್‌ರವರ ಅಧಿಕಾರಗಳು ಜಗಳದ ವಿಷಯವಾಗಿರುವುದಿಲ್ಲ.

***ಸಿಬಿಐ –ವಿರುದ್ಧ– ರಾಜಾಸ್ತಾನ್ ಸರ್ಕಾರ ಮತ್ತು ಇನ್ನೊಬ್ಬರು***[6], ಪ್ರಕರಣದಲ್ಲಿ ಪ್ರಕರಣದಲ್ಲಿ, ಸಂಹಿತೆಯ 156(3)ನೇ ಪ್ರಕರಣದಡಿಯಲ್ಲಿ ಮ್ಯಾಜಿಸ್ಟ್ರೇಟರು ಆದೇಶವನ್ನು ಹೊರಡಿಸಿದಾಗ, ದರ್ಜೆಯಲ್ಲಿ ಮೇಲಿರುವ ಯಾರೇ ಅಧಿಕಾರಿ ಅಥವಾ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಂಥ ಅಧಿಕಾರಿಯು ಅಂಥ ತನಿಖೆಯನ್ನು ನಡೆಸಲು ಅಧಿಕಾರವನ್ನು ಚಲಾಯಿಸಬಹುದೆಂದು ಮತ್ತು ಅಂಥ ಎಲ್ಲಾ ತನಿಖೆಯನ್ನು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯಿಂದಲೇ ತನಿಖೆ ಮಾಡಿಸಲಾಗಿದೆಯೆಂದು ಭಾವಿಸಲಾಗುತ್ತದೆಂದೂ ಅಭಿಪ್ರಾಯ ಪಡಲಾಗಿರುತ್ತದೆ. ಪೋಲೀಸ್ ಠಾಣೆಯ ಪ್ರಭಾರದಲ್ಲಿರುವಂಥ ಅಧಿಕಾರಿಯಿಂದ ಇಲ್ಲವೇ ತಾನಾಗಿಯೇ ಇಲ್ಲವೇ ಹಿರಿಯ ಅಧಿಕಾರಿಯ ಅಥವಾ ಸರ್ಕಾರದ ನಿರ್ದೇಶನದ ಮೇಲೆ ತನಿಖೆಯನ್ನು

6. ಎಐಆರ್ 2001 ಎಸ್‌ಸಿ 668

ಕೈಗೆತ್ತಿಕೊಳ್ಳಲು ಯಾರೇ ಹಿರಿಯ ಪೊಲೀಸ್ ಅಧಿಕಾರಿಗೆ ಇದು ಅನುಮತೀಯವಾಗಿರುತ್ತದೆ ಎಂದು ಅಭಿಪ್ರಾಯಪಡಲಾಗಿರುತ್ತದೆ. ದುರಾದೃಷ್ಟವಶಾತ್, ಸದರಿ ಪ್ರಕರಣದಲ್ಲಿ ಕಮೀಷನರ್‌ರವರು ಸ್ವತಃ ತನಿಖೆಯನ್ನು ಕೈಗೆತ್ತಿಕೊಳ್ಳದೆ, ತನಿಖೆಯನ್ನು ನಡೆಸಲು ಸಿಸಿಬಿ ಘಟಕದ ಪೊಲೀಸ್ ಅಧಿಕಾರಿಗೆ ಆದೇಶಿಸಲು ಸಹಾಯಕ ಪೊಲೀಸ್ ಆಯುಕ್ತರಿಗೆ (ಅಪರಾಧಗಳು) ನಿರ್ದೇಶಿಸಿರುತ್ತಾರೆ. ಸಂಹಿತೆಯ 36ನೇ ಪ್ರಕರಣದಡಿಯಲ್ಲಿ ಅವರ ಅಧಿಕಾರವನ್ನು ಚಲಾಯಿಸುವಾಗ, ವರಿಷ್ಠ ಅಧಿಕಾರಿಯ ಸ್ಥಾನದಲ್ಲಿರುವ ಪೊಲೀಸ್ ಕಮೀಷನರ್‌ರವರು, ಠಾಣೆಯ ಪ್ರಭಾರದಲ್ಲಿರುವ ಹುದ್ದೆಯ ದರ್ಜೆಗಿಂತ ಕಡಿಮೆ ಇರದಂಥ ಮತ್ತೊಬ್ಬ ಪೊಲೀಸ್ ಅಧಿಕಾರಿಯ ಮೂಲಕ ಸರಿಯಾದ ತನಿಖೆಗೆ ಸಂಬಂಧಿಸಿದಂತೆ ಸ್ಥಳೀಯ ಅಧಿಕಾರ ವ್ಯಾಪ್ತಿಯಿಂದ ತನಿಖೆಯನ್ನು ನಿರ್ವಹಿಸಲು ಸಹಾಯಕ ಪೊಲೀಸ್ ಆಯುಕ್ತರಿಗೆ ಅವರ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿತ್ತೆಂದು ಪ್ರತ್ಯರ್ಜಿದಾರರ ಪರವಾಗಿ ವಾದಿಸಲಾಗಿರುತ್ತದೆ. ಅಂಥ ನಿವೇದನೆಯನ್ನು ಮಾಡಿಕೊಳ್ಳುವಾಗ, ಪ್ರತ್ಯರ್ಜಿದಾರರು, ಬೇರೆ ಘಟಕದ ಬೇರೆ ಪೊಲೀಸ್ ಅಧಿಕಾರಿಗಳು ತನಿಖೆಯನ್ನು ಅಧಿಕೃತಗೊಳಿಸಲು ಭಾರತ ಸಂವಿಧಾನದ 12ನೇ ಅನುಚ್ಛೇದದಲ್ಲಿ ಉದ್ದೇಶಿಸಲಾದಂತೆ ರಾಜ್ಯಕ್ಕೆ ಎಂಬ ಪದಕ್ಕೆ ಬೆಂಗಳೂರು ನಗರ ಪೊಲೀಸ್ ಆಯುಕ್ತರು ಎಂಬ ಪದಾವಳಿಯು ಸಮವೆಂದು ನಿರೂಪಿಸಲು ವಿಫಲರಾಗಿರುತ್ತಾರೆ. ಅದು ತನಿಖಾ ಏಜೆನ್ಸಿಗಳ ಆಯ್ಕೆಯ ವಿಶೇಷಾಧಿಕಾರವಾಗಲೀ ಇಲ್ಲವೇ ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟರ ಆಯ್ಕೆ ಆಗಿರದೆ, ನ್ಯಾಯಿಕ ತೀರ್ಪುಗಳಿಂದ ಇತ್ಯರ್ಥಗೊಂಡದ್ದಾಗಿರುತ್ತದೆ. ಸಂವಿಧಾನದ 226ನೇ ಅನುಚ್ಛೇದದಡಿಯಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸಿ ರಾಜ್ಯ ಸರ್ಕಾರ ಅಥವಾ ಉಚ್ಚ ನ್ಯಾಯಾಲಯವು ಸ್ಥಳೀಯ ಪೊಲೀಸರಲ್ಲದೆ ಇತರ ಯಾವುದೇ ವಿಶೇಷ ಏಜೆನ್ಸಿಯಿಂದ ತನಿಖೆಗೆ ಆದೇಶಿಸಬಹುದು. ಪೊಲೀಸ್ ಅಧಿನಿಯಮ, 1861ರ 3ನೇ ಪ್ರಕರಣದಡಿಯಲ್ಲಿನ ಅಧೀಕ್ಷತೆಯ ಸಾಮಾನ್ಯ ಅಧಿಕಾರಗಳಡಿಯಲ್ಲಿ ರಾಜ್ಯ ಸರ್ಕಾರವು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದಡಿಯಲ್ಲಿ ಹೆಚ್ಚಿನ ತನಿಖೆಗೆ ನಿರ್ದೇಶಿಸುವ ಅಧಿಕಾರವನ್ನು ಹೊಂದಿರುತ್ತದೆ. ***ಬಿಹಾರ ಸರ್ಕಾರ ಮತ್ತು ಇನ್ನೊಬ್ಬರು –ವಿರುದ್ಧ– ಜೆ.ಎ.ಸಿ. ಸಲ್ಡಾನಾ ಮತ್ತು ಇತರರು***[7], ಸಾಮಾನ್ಯವಾಗಿ

7. 1980 ಎಸ್‌ಸಿಸಿ (ಸಿಆರ್‌ಐ) 272

ನ್ಯಾಯಾಲಯಗಳು ಪೊಲೀಸರು ತನಿಖೆ ಮಾಡುವ ವಿಷಯದಲ್ಲಿ ಮಧ್ಯೆ ಪ್ರವೇಶಿಸುವುದಿಲ್ಲ. ಆದಾಗ್ಯೂ, ತೀರಾ ಅಪರೂಪದ ಸಂದರ್ಭಗಳಲ್ಲಿ, ನ್ಯಾಯಾಲಯಗಳು ನಾಗರಿಕರ ವೈಯಕ್ತಿಕ/ಮಾಲೀಕತ್ವದ ಹಕ್ಕುಗಳನ್ನು ಸಂರಕ್ಷಿಸಲು ಮಧ್ಯೆ ಪ್ರವೇಶಿಸಬೇಕಾಗುತ್ತದೆ. ***ಮನೋಹರ್ ಲಾಲ್ ಶರ್ಮ –ವಿರುದ್ಧ– ಪ್ರಧಾನ ಕಾರ್ಯದರ್ಶಿ ಮತ್ತು ಇತರರು***[8].

13. ***ಸೆಂಟ್ರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ –ವಿರುದ್ಧ– ರಾಜಸ್ಥಾನ್ ಸರ್ಕಾರ*** **ಮತ್ತು ಇನ್ನೊಬ್ಬರು** (ಈ ಹಿಂದೆ ಹೇಳಿದ) ಪ್ರಕರಣದಲ್ಲಿ, ಸಂಹಿತೆಯ 156(3) ಪ್ರಕರಣದಡಿಯಲ್ಲಿ, ಸಿ.ಬಿ.ಐ.ಯ ತನಿಖೆಯನ್ನು ನಿರ್ದೇಶಿಸಲು ಮ್ಯಾಜಿಸ್ಟ್ರೇಟರ ಅಧಿಕಾರ ಪ್ರಶ್ನೆಗೆ ಸಂಬಂಧಿಸಿದಂತೆ ನ್ಯಾಯ ನಿರ್ಣಯಿಸುವಾಗ, ಸರ್ವೋಚ್ಚ ನ್ಯಾಯಾಲಯವು, ಸಂಹಿತೆಯ 36ನೇ ಪ್ರಕರಣದ ಹಿನ್ನೆಲೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"ಹೀಗೆಂದರೆ, ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ದರ್ಜೆಗಿಂತ ಉನ್ನತ ದರ್ಜೆಯಲ್ಲಿರುವ ಯಾರೇ ಪೊಲೀಸ್ ಅಧಿಕಾರಿಯು, ಪೊಲೀಸ್ ಠಾಣೆಯ ಪ್ರಕರಣದಲ್ಲಿರುವ ಅಧಿಕಾರಿಯ ಸದರಿ ಅಧಿಕಾರಗಳನ್ನೇ ಚಲಾಯಿಸಬಹುದು ಮತ್ತು ಆತ ಹಾಗೆ ಅಧಿಕಾರಗಳನ್ನು ಚಲಾಯಿಸಿದಾಗ, ಆತ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿ ಸ್ಥಾನದಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಆದರೆ ಮ್ಯಾಜಿಸ್ಟ್ರೇಟರು 156(3) ಪ್ರಕರಣದಡಿಯಲ್ಲಿ ತನಿಖೆಗೆ ಆದೇಶಿಸಿದಾಗ, ಅಂಥ ಅಧಿಕಾರಿಯು, ಸಂಹಿತೆಯ 36ನೇ ಪ್ರಕರಣದ ಬಲದಿಂದ ಅಂಥ ಅಧಿಕಾರಗಳನ್ನು ಚಲಾಯಿಸಬಹುದಾಗಿದ್ದಾಗ್ಯೂ, ಆತ ಅಂಥ ತನಿಖೆಯನ್ನು ನಡೆಸಲು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ನಿರ್ದೇಶಿಸಬಹುದಾಗಿರುತ್ತದೆಯೇ ಹೊರತು ವರಿಷ್ಠ ಪೊಲೀಸ್ ಅಧಿಕಾರಿಗೆ ಅಲ್ಲ. ಆದಾಗ್ಯೂ ಅಂಥ ಆದೇಶವನ್ನು ಹೊರಡಿಸಿದಾಗ,*

8. ಎಐಆರ್ 2014 ಎಸ್‌ಸಿ 666

*ಅಂಥ ಅಧಿಕಾರಿಯ ದರ್ಜೆಗಿಂತ ಮೇಲಿರುವ ಯಾರೇ ಪೊಲೀಸ್ ಅಧಿಕಾರಿಯು ತನಿಖೆ ನಡೆಸುವ ಅಧಿಕಾರವನ್ನು ಚಲಾಯಿಸ ಬಹುದಾಗಿರುತ್ತದೆ. ತರುವಾಯ ಅಂಥ ಎಲ್ಲಾ ತನಿಖೆಗಳನ್ನು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯಿಂದ ನಡೆಸಲಾಗುವುದೆಂದು ಭಾವಿಸಬೇಕಾಗುತ್ತದೆ. ಇದು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಪೂರಕ ಅಧಿಕಾರವಾಗಿದ್ದಾಗ್ಯೂ, ಸಂಹಿತೆಯ 36ನೇ ಪ್ರಕರಣವು, ಸಂಹಿತೆಯ 156(3)ನೇ ಪ್ರಕರಣದಲ್ಲಿ ರೂಪಿಸಿರುವ ಮ್ಯಾಜಿಸ್ಟ್ರೇರಿಯಲ್ ಅಧಿಕಾರವನ್ನು ಪ್ರತ್ಯಾಯೋಜಿಸಿದೆ ಎಂಬ ಅರ್ಥವನ್ನು ಹೊಂದಿರುವುದಿಲ್ಲ. ಯಾರೇ ವರಿಷ್ಠ ಪೊಲೀಸ್ ಅಧಿಕಾರಿಗೆ, ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಂಥ ಅಧಿಕಾರಿಯಿಂದ ಇಲ್ಲವೇ ತಾವಾಗಿಯೇ ಅಥವಾ ವರಿಷ್ಠ ಅಧಿಕಾರಿಯ ಅಥವಾ ಸರ್ಕಾರದ ನಿರ್ದೇಶನದ ಮೇಲೆ ತನಿಖೆಯನ್ನು ಕೈಗೆತ್ತಿಕೊಳ್ಳುವುದು ಅನುಮತೀಯವಾಗಿರುತ್ತದೆ".*

14. ಮೇಲಿನ ಅಭಿಪ್ರಾಯಗಳು, ನಾವು ಎದುರಿಸುತ್ತಿರುವ ನ್ಯಾಯಿಕ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ನೆರವು ನೀಡುತ್ತವೆ. ಪೊಲೀಸ್ ಕಮೀಷನರ್, ಸಂಹಿತೆಯ 36ನೇ ಪ್ರಕರಣದಡಿಯಲ್ಲಿ ಆತನ ಅಧಿಕಾರ ವ್ಯಾಪ್ತಿಯ ಅಧಿಕಾರವನ್ನು ಚಲಾಯಿಸಬಹುದಾಗಿರುತ್ತದೆ ಹಾಗೂ ಸ್ವತಃ ತನಿಖೆಯನ್ನು ನಡೆಸಬಹುದಾಗಿರುತ್ತದೆ. ಆದರೆ, ಕಿರಿಯ ದರ್ಜೆಯ ಅಧಿಕಾರಿಗೆ ತನಿಖೆಯ ಅಧಿಕಾರವನ್ನು ಪ್ರತ್ಯಾಯೋಜಿಸಲು ಯಾರೇ ಶಾಸನಾತ್ಮಕ ಪ್ರಾಧಿಕಾರ ಇಲ್ಲದಿರುವಲ್ಲಿ, ಆತ ಸಿಸಿಬಿ, ಘಟಕಕ್ಕೆ ಪ್ರಕರಣವನ್ನು ವಹಿಸಿಕೊಡಲಾಗುವುದಿಲ್ಲ. ಸ್ವಲ್ಪ ಮಟ್ಟಿಗೆ ತನಿಖೆಯನ್ನು ಪ್ರತ್ಯಾಯೋಜಿಸುವ ಅಧಿಕಾರವು, ಸಂಹಿತೆಯ 157(1)ನೇ ಪ್ರಕರಣದಡಿಯಲ್ಲಿ ಕಾರ್ಯ ನಿರ್ವಹಿಸುವಂಥ ಠಾಣಾಧಿಕಾರಿಯೊಂದಿಗೆ ನಿಹಿತವಾಗಿರುತ್ತದೆ. ಆ ಮೂಲಕ ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ಆತ ರಾಜ್ಯ ಸರ್ಕಾರವು ವಾಸ್ತವಾಂಶ ಮತ್ತು ಪ್ರಕರಣದ ಸಂದರ್ಭಗಳನ್ನು ತನಿಖೆ ನಡೆಸಲು ಮತ್ತು ಅವಶ್ಯಕತೆ ಇದ್ದಲ್ಲಿ, ಪತ್ತೆ ಹಚ್ಚಲು ಕ್ರಮ ಕೈಗೊಳ್ಳುವುದಕ್ಕೆ ಮತ್ತು ಅಪರಾಧಿಯನ್ನು ದಸ್ತಗಿರಿ ಮಾಡಲು ನಿರ್ದೇಶಿಸಬಹುದಾದಂಥ ದರ್ಜೆಗಿಂತ

ಕಡಿಮೆ ಇರದಂಥ ಆತನ ಅಧೀನ ಅಧಿಕಾರವನ್ನು ಪ್ರತಿನಿಯೋಜಿಸಬಹುದಾಗಿರುತ್ತದೆ. ಸಂಹಿತೆಯ 157ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿನ ಉಪಬಂಧವನ್ನು ಹೊರತುಪಡಿಸಿ, ಅಧಿಕಾರದ ಪ್ರತ್ಯಾಯೋಜನೆಯ ಪರಿಕಲ್ಪನೆಯನ್ನು ಸಂಹಿತೆಯಿಂದಾಗಲೀ ಅಥವಾ ಕರ್ನಾಟಕ ಪೊಲೀಸ್ ಅಧಿನಿಯಮದ ಮೂಲಕವಾಗಲೀ ಗ್ರಹಿಸಲಾಗುವುದಿಲ್ಲ. ಅದು ಚರ್ಚೆಯ ಆರಂಭದಲ್ಲಿ ಈ ಹಿಂದೆ ಉದ್ಭವಿಸಿದ ಪ್ರಶ್ನೆಗಳಿಗೆ ಉತ್ತರಿಸುತ್ತದೆ. ಆ ಮೂಲಕ ಅನುಬಂಧ 'ಡಿ' ಯಲ್ಲಿ ಆಯುಕ್ತರು ಹೊರಡಿಸಿದ ಆದೇಶವು ಅಧಿಕಾರ ಮತ್ತು ಮಾಲೀಕತ್ವ ರಹಿತವಾದುದಾಗಿರುತ್ತದೆ. ಈ ಸಮಯದಲ್ಲಿ ತೀರ್ಮಾನಕ್ಕೆ ಬರಬಹುದಾದಂಥ ತನಿಖೆಯ ಮಧ್ಯದಲ್ಲಿ ಮಧ್ಯೆ ಪ್ರವೇಶಿಸುವುದು ಮತ್ತು ವರ್ಗಾಯಿಸುವುದು ಕಾನೂನು ಬಾಹಿರವಾದುದಾಗಿರುತ್ತದೆ. ಫಿರ್ಯಾದು ಮುಂತಾದವುಗಳ ನೋಂದಣಿಯ ಕಾನೂನು ಸಮ್ಮತತೆಗೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ. ಅರ್ಜಿದಾರರು, ಫಿರ್ಯಾದು ಮತ್ತು ಪ್ರಥಮ ಮಾಹಿತಿ ವರದಿಯನ್ನು ರದ್ದುಪಡಿಸಲು ಕೋರಿದ್ದಾಗ್ಯೂ, ಸಂಹಿತೆಯ 156(3)ಪ್ರಕರಣದಡಿಯಲ್ಲಿ ಹೊರಡಿಸಿದ ಮಾನ್ಯ ಮ್ಯಾಜಿಸ್ಟ್ರೇಟರ ಆದೇಶವು, ಆತ ಫಿರ್ಯಾದಿನ ದೃಢೋಕ್ತಿಗಳನ್ನು ಪರಿಶೀಲಿಸಿರುತ್ತಾನೆಂದು ಪೊಲೀಸರ ತನಿಖೆಗೆ ಸಂಬಂಧಿಸಿದಂತೆ ಇದು ಅವಶ್ಯಕವೆಂದು ಭಾವಿಸಿರುತ್ತದೆಂಬುದನ್ನು ಮನವರಿಕೆ ಮಾಡಿಕೊಡುತ್ತದೆ ಮತ್ತು ಸದರಿ ಆದೇಶವು ಮಧ್ಯೆಪ್ರವೇಶಿಸಲು ನಿರ್ಬಂಧಿಸುವುದಿಲ್ಲ. ಆದಾಗ್ಯೂ ಫಿರ್ಯಾದುದಾರರು ಮತ್ತು ಆಪಾದಿತರು ತನಿಖೆಯ ಅಂತಿಮ ವರದಿಯಿಂದ ಬಾಧಿತರಾದಲ್ಲಿ, ಸದರಿ ಆದೇಶವನ್ನು ಪ್ರಶ್ನಿಸಲು ಅವರು ಅವಕಾಶವನ್ನು ಹೊಂದಿರುತ್ತಾರೆ.

15. ಅರ್ಜಿಯನ್ನು ಭಾಗಶಃ ಅಂಗೀಕರಿಸಲಾಗಿರುತ್ತದೆ.

ಅನುಬಂಧ–ಡಿಯಲ್ಲಿ 25.04.2015ರಂದು ಮೊದಲ ಪ್ರತ್ಯರ್ಜಿದಾರರು ಹೊರಡಿಸಿದ ಆದೇಶವನ್ನು ರದ್ದುಪಡಿಸಲಾಗಿರುತ್ತದೆ.